ಬಗ್ಗೆ ಮಾತನಾಡುವುದು, ಹಾಗೆ ಮಾತನಾಡಬಾರದು. ನಮ್ಮದು ಒಂದು ರಾಜ್ಯ. ಈ ರಾಜ್ಯ ಒಂದು ಆಗುವುದಕ್ಕೆ ಜನ ಎಷ್ಟು ಕಾಲ ಪ್ರಯತ್ನ ಮಾಡಿದರು. ಆದುದರಿಂದ ಇವತ್ತು ಏನು ಮಾನ್ಯ ನಂಜೇಗೌಡರು ಭಾವನಾತ್ಮಕವಾಗಿ ಹೇಳಿದರು. ಅವರ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಇಲ್ಲಿಯೂ ಇರಲಿ, ಅಲ್ಲಿ ಮಾಡುವುದಕ್ಕೆ ಬಂದಿರುವ ಕಷ್ಟವೇನು? ಒಂದು ಹೊಸ ಜೋನಲ್ ಹೆಡ್‌ಕ್ವಾರ್ಟ್ರಸ್ ತೆಗೆಯುವುದರಿಂದ ನೂರಾರು ಕೋಟಿ ಏನೂ ಬೇಕಾಗುವುದಿಲ್ಲ. ನಮ್ಮ ರಾಜ್ಯದ ಎಲ್ಲಾ ಸಂಸದ್ ಸದಸ್ಯರು ಹಾಗೂ ನಮ್ಮ ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಒಂದು ಸಭೆ ಸೇರಿ ಪ್ರಧಾನಿಯವರಿಗೆ ಅಲ್ಲಿ ಒಂದು ವಲಯ ಮಾಡಿ ಎಂದು ಹೇಳೋಣ. ಏನು ತಪ್ಪು? ಆ ನಿಲುವು ತೆಗೆದುಕೊಳ್ಳಬೇಕೇ ಹೊರತು ಹುಬ್ಬಳ್ಳಿ ಎಂದರೆ ಉತ್ತರ ಕರ್ನಾಟಕ ಎಂದು ಮಾನ್ಯ ಚಂದ್ರಕಾಂತ್ ಬೆಲ್ಲದ್ ಹೇಳಿದ ಹಾಗೆ ಅಲ್ಲ.

ಶ್ರೀ ಜಿ. ಚಂದ್ರಕಾಂತ ಬೆಲ್ಲದ್ : ಸಮಗ್ರ ಕರ್ನಾಟಕ ದೃಷ್ಟಿಯಿಂದ ಹುಬ್ಬಳ್ಳಿ ಬಹಳ ಯೋಗ್ಯವಾದ ಸ್ಥಳ ಎಂದು ಹೇಳಿದೆ.

ಶ್ರೀ ಜೆ. ಹೆಚ್. ಪಟೇಲ್ : ನಿಮ್ಮ ಮಾತನ್ನು ನಾನು ಒಪ್ಪಿದೆ. ಆ ಸಮಗ್ರ ಭಾವನೆ ಎಲ್ಲರಿಗೂ ಬರಬೇಕು.

ಡಾ॥ ಎಂ.ಪಿ. ಕರ್ಕಿ : ಕೆಲವೊಂದು ಹಿಂದುಳಿದ ಪ್ರದೇಶಗಳಾಗಿದ್ದರೆ, ಅದನ್ನು ಸರ್ಕಾರದ ಗಮನಕ್ಕೆ ತರುವುದರಿಂದ ತೊಂದರೆ ಏನಿಲ್ಲ. ಆದರೆ ನಮಗೆ ತೊಂದರೆ ಎಂದು ಹೇಳುವುದು ರಾಜಕೀಯ ದೃಷ್ಟಿಯಿಂದ ಅಲ್ಲ, ಸಮಾಜದ ದೃಷ್ಟಿಯಿಂದ ರಾಜ್ಯದ ಒಳಿತಿನ ದೃಷ್ಟಿಯಿಂದ ತಂದರೆ ತಪ್ಪಾಗುವುದಿಲ್ಲ. ರಾಜಕೀಯ ಮಾಡಬಾರದು. ಅದರ ರಾಜಕೀಯ ತಿಳಿದುಕೊಳ್ಳಬೇಕಾಗಿಲ್ಲ.

ಅಧ್ಯಕ್ಷರು : ಮಾಡಬಾರದು. ಈಗ ಮಾಧುಸ್ವಾಮಿ ಹಾಗೂ ಮುದ್ದಹನುಮೇಗೌಡ ಅವರದ್ದು ಗಮನ ಸೆಳೆಯುವ ಸೂಚನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದು ಸ್ಟೇಟ್‌ಮೆಂಟ್ ಮಾಡಿಸಬೇಕು...

ಅಧ್ಯಕ್ಷರು : ಮಾಡಿಸುತ್ತೇನೆ. ಕೊನೆಯಲ್ಲಿ ಸಂಜೆ ಮಾಡಿಸುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ ಸದಸ್ಯರು ಮಾತನಾಡುವುದು ಇನ್ನು ಮುಂದಕ್ಕೆ ಹೋಗುತ್ತಿದೆ. ನಾಳೆ ಉತ್ತರ ಇದೆ.

ಗಮನ ಸೆಳೆಯುವ ವಿಷಯಗಳು

(ಅ) ಕರ್ನಾಟಕ ವಿದ್ಯುಚ್ಛಕ್ತಿ ಉಗ್ರಾಣಗಳನ್ನು ಆಯಾ ಉಪವಿಭಾಗದಲ್ಲಿ ಮುಂದುವರಿಸುವ ಬಗ್ಗೆ.

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೇ, ಕೆ. ಇ.ಬಿ. ಉಪ ವಿಭಾಗಗಳಿಗೆ ಹೊಂದಿಕೊಂಡಂತೆ ಅಲ್ಲಿ ಉಗ್ರಾಣಗಳು ಇತ್ತು. ಆ ಉಗ್ರಾಣಗಳಿಂದ ಕೆ. ಇ.ಬಿ. ಯವರು ಸಾಮಗ್ರಿಗಳು ಕೊಡುವುದರ ಜೊತೆಗೆ ರೈತರೂ ಕೂಡ ಅವರಿಗೆ ಏನಾದರೂ ಸಾಮಗ್ರಿಗಳು ಬೇಕಾದರೆ ಅಲ್ಲಿಂದ ತೆಗದುಕೊಂಡು ಹೋಗುವಂತಹ ವ್ಯವಸ್ಥೆ ಬಹಳ ವರ್ಷಗಳಿಂದ ಈ ರಾಜ್ಯದಲ್ಲಿ ನಡೆದುಕೊಂಡು ಬಂದಿತ್ತು. ಕೆ. ಇ.ಬಿ. ಯವರಿಗೆ ಅವರದೇ ಲಾರಿಗಳಲ್ಲಿ

ಮೆಟಿರೀಯಲ್ಸ್ ಅನ್ನು ವರ್ಕ್ ಶಾಪ್‌ನಿಂದ ಕೊಡುತ್ತೇನೆ. ಎಂಬ ಭಾವನೆ ಇದ್ದರೂ ಕೂಡ ವಾಸ್ತವಾಗಿ ಇವತ್ತು ಜನ ಬಂದು ಅವರಿಗೆ ಬೇಕಾದಂತಹ ಟ್ರಾನ್ಸ್‌ಫಾರ್ಮರ್, ತಂತಿ ಇಂತಹವುಗಳನ್ನು ತೆಗೆದುಕೊಂಡು ಹೋಗುವುದು ಮಾಮೂಲಾಗಿದೆ. ಇಂತಹ ವ್ಯವಸ್ಥೆ ನೆಡೆದುಕೊಂಡು ಹೋಗಬೇಕಾದರೆ ಏಕೋ ಏನೋ ಕೆ. ಇ. ಬಿ. ಮಂಡಲಿ ಯವರು ಏಕಾಏಕಿ ತೀರ್ಮಾನ ತೆಗೆದುಕೊಂಡು ಸುಮಾರು ಸುಮಾರು 40 ಸಬ್ ಡಿವಿಜನ್ ಸ್ಟೋರ್ಸ್‌ನ್ನು ಬೇರೆ ತಾಲ್ಲೂಕುಗಳಿಗೆ ಅಮಾಲ್‌ಗಮೇಟ್ ಮಾಡಿ ನಾವು ಡಿವಿಜನ್ ಸ್ಟೋರ್ ಮಾಡುತ್ತೇವೆ ಎಂದು ಹೇಳಿ ನಂತರ ನಾವು ಪ್ರಶ್ನೆ ಮಾಡಿದಾಗ ಇಲ್ಲ ಎಲ್ಲಾ ಸಬ್ ಡಿವಿಜನ್ ಸ್ಟೋರ್ಸ್ ಅನ್ನು ಡಿವಿಜನ್‌ಗೆ ಟ್ಯಾಗ್ ಮಾಡುತ್ತೇವೆಂದು ಹೇಳಿ, ನಾನು ಮುಖ್ಯಮಂತ್ರಿಗಳಜನ್ನು ಕೇಳಿ, ಅವರು ದೊಡ್ಡ ಮನಸ್ಸು ಮಾಡಿ ಮುಂದುವರೆಸಿ ಎಂದರೂ ಕೂಡ.

MR. SPEAKER : This is Call Attention. You have to first call the attention of the Hon'ble Minister. ಅವರು ಹೇಳಿಕೆ ಮಾಡುತ್ತಾರೆ. ಹೇಳಿಕೆ ಮಾಡಿದ ಮೇಲೆ ರಿಟರ್ನ್ ಸ್ಟೇಟ್‌ಮೆಂಟ್ ಏನಿರುತ್ತದೆ. ಅದರ ವಿಚಾರದಲ್ಲಿ ಸ್ಪಷ್ಟೀಕರಣ ಕೇಳಿ. ನೀವು ಮೊದಲು ಅವರ ಗಮನ ಸೆಳೆದುಬಿಡಿ ರಾಜ್ಯದ ಎಲ್ಲಾ ಕಡೆ ಕೆ. ಇ. ಬಿ. ಯವರು ಉಗ್ರಾಣಗಳನ್ನು ಹಿಂದೆಗೆಯುತ್ತಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಸನ್ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ ಎಂದು ಹೇಳಿ. ಸಚಿವರೇ ತಾವು ಹೇಳಿಕೆ ಓದಿಬಿಡಿ.

ಶ್ರೀ. ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಸಬ್ ಡಿವಿಜನ್‌ಗೆ ಹೊಂದಿಕೊಂಡಿದ್ದಂತಹ ಉಗ್ರಾಣಗಳನ್ನು ಬದಲಾಯಿಸಿ ಡಿವಿಜನ್‌ಗೆ ಸೇರಿಸಿರುವುದರಿಂದ ರೈತರಿಗೆ ಉಂಟಾಗಿರುವ ಸಮಸ್ಯೆ ಬಗ್ಗೆ ಮಾನ್ಯ ಇಂಧನ ಸಚಿವರ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ. ಕರ್ನಾಟಕ ವಿದ್ಯುಚ್ಛಕ್ತಿ ಚಿಳುವಳಿಯಲ್ಲಿ ಒಟ್ಟು 245 ಉಗ್ರಾಣಗಳಿದ್ದವು. ಇವುಗಳಲ್ಲಿ 147 ಉಗ್ರಾಣಗಳು ಕಾರ್ಯ ಮತ್ತು ಪಾಲನೆಯ ಉಪ ವಿಭಾಗದ ಉಗ್ರಾಣಗಳು, 48 ಉಗ್ರಾಣಗಳು ಕಾರ್ಯ ಮತ್ತು ಪಾಲನೆಯ ವಿಭಾಗದ ಉಗ್ರಾಣಗಳು, ಹಾಗೂ ಉಳಿದ 50 ಉಗ್ರಾಣಗಳು ಇತರೆ ವಿಭಾಗಗಳಾದ ಬೃಹತ್ ಕಾಮಗಾರಿ, ಮಾಪಕ ಪರೀಕ್ಷಾ, ರಿಲೇ ಪರೀಕ್ಷಾ ಮತ್ತು ದೂರ ಸಂಪರ್ಕ ಇತ್ಯಾದಿಗಳಿಗೆ ಸೇರಿರುತ್ತವೆ. 147 ಉಪ ವಿಭಾಗೀಯ ಉಗ್ರಾಣಗಳ ಪೈಕಿ, ಕೇವಲ 43 ಉಪ ವಿಭಾಗೀಯ ಉಗ್ರಾಣಗಳನ್ನು ಮಾತ್ರ ಅವುಗಳಿಗೆ ಸಂಬಂಧಿಸಿದ ವಿಭಾಗೀಯ ಉಗ್ರಾಣಗಳೊಡನೆ ವಿಲೀನಗೊಳಿಸಲಾಗಿದೆ. ಉಪ ವಿಭಾಗೀಯ ಉಗ್ರಾಣಗಳನ್ನು ಅವುಗಳ ವಿಭಾಗೀಯ ಉಗ್ರಾಣಗಳೊಂದಿಗೆ ವಿಲೀನಗೊಳಿಸಲು ಕಾರಣವೇನೆಂದರೆ ತುಂಬಾ ಹಿಂದಿನಿಂದ ಹಲವು ಉಗ್ರಾಣಗಳಲ್ಲಿ ಸಾಮಗ್ರಿಗಳನ್ನು ಹೊಂದಿದ್ದರಿಂದ ಸಾಮಗ್ರಿಗಳ ಅನವಶ್ಯಕ ನಿರ್ವಹಣಾ ವೆಚ್ಚ, ಹಲವು ಸಲ ಸಾಮಗ್ರಿಗಳ ಸ್ವೀಕೃತಿ ಮತ್ತು ನೀಡಿಕೆಗೆ ಸಂಬಂಧಿಸಿದಂತೆ, ಉಗ್ರಾಣ ಲೆಕ್ಕಗಳ ಮರು ದಾಖಲಾತಿ ಆಗುತ್ತಿತ್ತು. ಆದ್ದರಿಂದ, ಆಡಳಿತಾತ್ಮಕ ಅನುಕೂಲಕ್ಕಾಗಿ ಕೆಲವು ಉಪ ವಿಭಾಗಗಳ ಉಗ್ರಾಣಗಳನ್ನು ಸ್ಥಳಾಂತರಿಸಲು ನಿರ್ಧರಿಸಲಾಯಿತು. ಕೆಲವು ಉಗ್ರಾಣಗಳನ್ನು ವಿಲೀನಗೊಳಿಸಿದ್ದಾಗ್ಯೂ ಮಂಡಳಿಯ ದಿನನಿತ್ಯದ ಹಾಗು ಮುಖ್ಯವಾಗಿ ಬೇಕಾಗುವ ಉಪ ವಿಭಾಗಗಳ

ಕಾರ್ಯನಿರ್ವಹಣೆಗೆ ಅವಶ್ಯ ಸಾಮಗ್ರಿಗಳಾದ ಹೆಚ್. ಟಿ. ಮತ್ತು ಎಲ್. ಟಿ. ಇನ್ಸುಲೇಟರ್‌ಗಳು, ವಿದ್ಯುತ್ ಟೇಪುಗಳು, ವಿವಿಧ ಗಾತ್ರದ ಕಾಪರ್ ಲಗ್ಗುಗಳು, ಹೊಸ ಕಟ್‌ಔಟ್, ಪಿವಿಸಿ ತಂತಿಗಳು, ಟ್ರಾನ್ಸ್‌ಫಾರ್ಮರ್ ತೈಲ, ಮುಂತಾದವುಗಳ ಕ್ರಮ ನಿರ್ವಹಣಾ ಕೆಲಸಗಳಿಗೋಸ್ಕರ ಉಪ ವಿಭಾಗಗಳಲ್ಲಿ ಇಟ್ಟು ಕೊಳ್ಳಲಾಗಿದೆ. ಇದಲ್ಲದೆ ವಿವಿಧ ಸಾಮರ್ಥ್ಯಗಳ ೧೦ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಉಪ ವಿಭಾಗಗಳಲ್ಲಿ ಸ್ಟಾಕ್‌ನಲ್ಲಿ ಇಟ್ಟು ಕೊಳ್ಳಲಾಗುತ್ತಿದೆ. ಯಾವಾಗಲೂ ಕನಿಷ್ಟ ಸಂಖ್ಯೆಯ ಟ್ರಾನ್ಸ್‌ಫಾರ್ಮರ್‌ಗಳನ್ನು ಹೊಂದುವ ಉದ್ದೇಶದಿಂದ ಕಾಲಕಾಲಕ್ಕೆ ಅವು ಖರ್ಚಾದಂತೆ ಅವುಗಳನ್ನು ತುಂಬಲಾಗುವುದು. ಪ್ರತಿ ಉಪ ವಿಭಾಗವು ಹೊಸ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ವ್ಯವಸ್ಥೆ ಮಾಡಲು ವಿವಿಧ ಸಾಮರ್ಥ್ಯದ ೩೦೦ ರಿಂದ ೫೦೦ ವಿದ್ಯುತ್ ಮಾಪಕಗಳನ್ನು ಹೊಂದಿರುತ್ತದೆ.

ಕನಿಷ್ಠ ವ್ಯವಹಾರವಿರುವ ಮತ್ತು ವಿಭಾಗ ಉಗ್ರಾಣದಿಂದ ಕೇವಲ ೧೦ ರಿಂದ ೨೫ ಕಿ.ಮೀ. ದೂರದೊಳಗಿರುವ ಉಪ ವಿಭಾಗಗಳನ್ನು ಮಾತ್ರ ವಿಭಾಗೀಯ ಉಗ್ರಾಣದೊಂದಿಗೆ ವಿಲೀನಗೊಳಿಸಲಾಗಿದೆ. ಅಲ್ಲದೆ, ಕೆಲಸಗಳನ್ನು ಟರ್ನ್ ಕೀ ಆಧಾರದ ಮೇಲೆ ಕಾರ್ಯಗತಗೊಳಿಸಲು ಮಂಡಳಿಯು ನಿರ್ಧರಿಸಿರುವುದರಿಂದ ಉಗ್ರಾಣ ಸಾಮಗ್ರಿ ವ್ಯವಹಾರವು ತೀವ್ರ ರೀತಿಯಲ್ಲಿ ಕಡಿತಗೊಂಡಿದೆ. ಈ ಕಾರಣದಿಂದ, ಸಾರ್ವಜನಿಕರಿಗಾಗಲೀ ಅಥವಾ ಬಳಕೆದಾರರಾಗಲೀ ಯಾವುದೇ ರೀತಿಯ ಅನಾನುಕೂಲಕ್ಕೆ ಒಳಗಾಗುವುದಿಲ್ಲ.

ಹೊಸ ನೇಮಕಾತಿಯಿಂದ ಮಂಡಳಿಯ ಮೇಲೆ ಉಂಟಾಗುವ ಆರ್ಥಿಕ ಭಾರವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಈ ರದ್ದುಗೊಳಿಸುವಿಕೆಯಿಂದ ಹೆಚ್ಚುವರಿಯಾದ ಸಿಬ್ಬಂದಿಯನ್ನು ಪ್ರಮುಖ ಕೆಲಸಗಳಿಗೆ ನಿಯೋಜಿಸಲಾಗಿದೆ. ಉಗ್ರಾಣ ಸಾಮಗ್ರಿಗಳ ನಿರ್ವಹಣೆಯ ಮೇಲೆ ಹೆಚ್ಚಿನ ವ್ಯವಸ್ಥಿತ ನಿಯಂತ್ರಣವನ್ನು ಹೊಂದಲು ಉಪ ವಿಭಾಗಗಳ ಉಗ್ರಾಣಗಳನ್ನು ವಿಭಾಗ ಉಗ್ರಾಣಗಳೊಂದಿಗೆ ವಿಲೀನಗೊಳಿಸಲು ಮಂಡಳಿಯು ನಿರ್ಧರಿಸಿದೆ. ಆದಾಗ್ಯೂ ತನ್ನ ಎಲ್ಲ ಇತಿ ಮಿತಿಗಳೊಳಗೂ ಕೂಡ, ಮಂಡಳಿಯು ಗ್ರಾಮೀಣ ಬಡ ಜನರ ಏಳಿಗೆಗಾಗಿ ಸರ್ಕಾರವು ರೂಪಿಸಿರುವ ಸಾಮಾಜಿಕ ಹಾಗೂ ಆರ್ಥಿಕ ಕಾರ್ಯಕ್ರಮಗಳನ್ನು ಈಡೇರಿಸುತ್ತಿದೆ. ಉಪ ವಿಭಾಗಗಳ ಉಗ್ರಾಣಗಳ ವಿಲೀನತೆಯು ಮಂಡಳಿಯ ಸಾಧನೆಗೆ ಅಡ್ಡಿಯಾಗಿರುವುದಿಲ್ಲ.

+ ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಉಪ ಪ್ರಶ್ನೆ ಕೇಳಬೇಕೆಂದರೆ ಬಹಳ ಕೇಳಬೇಕಾಗುತ್ತದೆ. ಏಕೆಂದರೆ ಈ ರಾಜ್ಯದಲ್ಲಿ ಅವರು ಒಂದು ಎವಲ್ಯೂಷನ್ ಮಾಡಿಸಿದ್ದಾರೆ. ಎಲ್ಲಿ ದುರುಪಯೋಗವಾಗಿದೆ ಆ ಆಧಾರದ ಮೇಲೆ ಸ್ಟೋರ್ಸ್ ಶಿಫ್ಟ್ ಆಗಿಲ್ಲ. ನಮ್ಮ ತುಮಕೂರು ಜಿಲ್ಲೆಯಲ್ಲಿ ಎರಡು ತಾಲ್ಲೂಕು ಎಂದರೆ ಪಾವಗಡ ಚಿಕ್ಕನಾಯಕನ ಹಳ್ಳಿ ವೈಟ್ ತಾಲ್ಲೂಕುಗಳಾಗಿದ್ದು ಇವತ್ತು ಐ.ಪಿ. ಸೆಟ್‌ಗೆ ಮೆಟಿರೀಯಲ್ಸ್ ಕೊಡಬೇಕಾಗಿತ್ತು ಎಂದು ಹೇಳಿ ಚಿಕ್ಕನಾಯಕನ ಹಳ್ಳಿ ಕಡೆ ಶಿಫ್ಟ್ ಮಾಡುತ್ತೀರಿ; ದುರುಪಯೋಗವಾಗಿರುವುದು ನನ್ನ ಪಕ್ಕದ ತಾಲ್ಲೂಕಿನಲ್ಲಿ, ಅಲ್ಲೆ ಚೇಂಜ್ ಮಾಡುವುದಿಲ್ಲ. ಸಬ್ ಡಿವಿಜನ್‌ನಲ್ಲಿ ಸ್ಟೋರ್ಸ್‌ನಲ್ಲಿ ಇದ್ದಂತಹ ಸ್ಟಾಫ್‌ನ್ನು ಎಲ್ಲೂ ನೀವು ರಿ-ಪ್ಯಾಟ್ರಿಯೇಟ್ ಮಾಡಲಿಲ್ಲ. ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರಿಗೆ ಡೈರೆಕ್ಟ್ ಆಗಿ ಪೇಮೆಂಟ್ ಆಗುತ್ತಿಲ್ಲ. ಸಬ್ ಡಿವಿಜನ್ ಲೆವೆಲ್‌ನಲ್ಲಿ ಬಹಳ ಹಣ ತಿನ್ನುತ್ತಾರೆ ಎನ್ನುವ ಕಾರಣಕ್ಕೆ ಬಂದ ಒಂದು ವರಿದ ಮೇಲೆ ಈ ಉಗ್ರಾಣಗಳನ್ನು ಮಾಡುವುದು ಮತ್ತು ಎಲ್ಲಾ ರೈತರಿಗೆ ಕೊಡುತ್ತೇವೆ ಎಂದು ನೀವು ಹೇಳಿದಿರಿ; ಒಂದು ಮಾಹಿತಿಯನ್ನು ತರಿಸಬೇಕು. ನನ್ನ ಕ್ಷೇತ್ರದಲ್ಲಿ ವರ್ಷಕ್ಕೆ ೩೦೦-೪೦೦

ಟ್ರಾನ್ಸ್‌ಫಾರ್ಮರ್ ಫೇಲ್ ಬೇಕಾಗುತ್ತದೆ. ಪ್ರತಿದಿವಸ ರೈತರು ಬಂದು ನಮ್ಮ ಸಬ್ ಡಿವಿಜನ್‌ನಲ್ಲಿ ಹೆಡ್‌ಕ್ವಾರ್ಟರ್ಸ್‌ಗೆ ಹೋಗುವುದಕ್ಕಾಗುತ್ತದೆಯೇ? ನಾವು ತಾಲ್ಲೂಕಿಗೆ ಬಂದು ತೆಗೆದುಕೊಂಡು ಹೋಗುವುದೇ ಕಷ್ಟ. ಒಂದು ಲಾರಿ ಇರುತ್ತದೆ. ಇದು ಎಕ್ಸಿಕ್ಯೂಟೀವ್ ಇಂಜಿನಿಯರ್, ಚೀಫ್ ಇಂಜಿನಿಯರ್ ಮಧ್ಯೆ ಓಡಾಡುವುದಕ್ಕೆ ಲಾರಿ ಸಾಕಾಗುವುದಿಲ್ಲ. ಇಷ್ಟೋಂದು ರೀತಿಯಲ್ಲಿ ಜನಗಳಿಗೆ ಕೆಟ್ಟದ್ದು ಮಾಡುವ ತೀರ್ಮಾನಕ್ಕೆ ಸನ್ಮಾನ್ಯ ಸಚಿವರು ಏಕೆ ಸೈನ್ ಹಾಕಿದ್ದಾರೋ ನನಗೆ ಗೊತ್ತಿಲ್ಲ. ನನಗೆ ಗೊತ್ತು ಅವರಿಗೆ ಹೃದಯದಲ್ಲಿ ಈ ಆಸೆ ಇಲ್ಲ ಎಂದು. ಇದರಿಂದ ಅವರಿಗೇ ಖಾಸಗಿಯಾಗಿ ತೊಂದರೆಯಾಗಿದೆ. ಅವರ ಉಗ್ರಾಣವೇ ಶಿಫ್ಟ್ ಆಗಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬೇಡಿಕೊಳ್ಳುವುದೇನೆಂದರೆ ಇರುವ ಸವಲತ್ತುಗಳನ್ನು ತಾವು ಮುಂದುವರೆಸಿಕೊಡಬೇಕು. ಡಿವಿಜನ್ ಎಂದು ಹೇಳುತ್ತೀರಿ, ನಾವು ಎಂ. ಎಲ್. ಎ.ಗಳು ಜಗಳ ಆಡಬೇಕಾಗುತ್ತದೆ. ನಾವು ಇಲ್ಲಿಂದ ಸ್ವಲ್ಪ ಮೆಟೀರಿಯಲ್ಸ್ ತೆಗೆದುಕೊಂಡು ಹೋಗಿ ಅಲ್ಲಿಂದ ವಿತರಣೆ ಆಗಬೇಕಾದರೆ ೩-೪ ಭಾಗ ಮಾಡಿ ಎಂದು ಕಾದಾಡಬೇಕಾಗುತ್ತದೆ. ಇದರಿಂದ ಯಾವುದೇ ಪರಿಣಾಮಕಾರಿ ಉಳಿತಾಯ ಕೆ. ಇ.ಬಿ.ಗೆ ಆಗುವುದಿಲ್ಲ. ದಯಮಾಡಿ ಸಬ್ ಡಿವಿಜನ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಏನು ಉಗ್ರಾಣಗಳು ಇದೆ, ಅದನ್ನು ಮುಂದುವರೆಸಿ ಕೂಡಲೇಬೇಕು ಎಂದು ಒತ್ತಾಯ ಮಾಡುತ್ತೇನೆ. ಇದೆಲ್ಲಾ ಹೇಳುವುದು ನೆಪಮಾತ್ರಕ್ಕೆ. ರೈತರು ಕಂಗಾಲಾಗಿದ್ದಾರೆ. ಇವತ್ತು ಒಂದು ಡಿ.ಸಿ. ಕೂಡಿ ಎಂದರೆ ಚಿಕ್ಕನಾಯಕನ ಹಳ್ಳಿಗೆ ಹೋಗಿ ಮಾಡಿಸಬೇಕು. ತಿಪಟೂರಿಗೆ ಮತ್ತೊಂದು ಕಡೆ ಟ್ರಾಕ್ಟರ್ ತೆಗೆದುಕೊಂಡು ಹೋಗಬೇಕು. ಇವರು ಕೊಡುತ್ತೇನೆ ಎಂದರೆ ಅಲ್ಲಿ ಎಕ್ಸಿಕ್ಯೂಟೀವ್ ಇಂಜಿನಿಯರ್ ಇಲ್ಲ ಎಂದು ವಾಪಸ್ಸು ಬರಬೇಕು. ಇವತ್ತು ನಮ್ಮ ಮನೆ ಮುಂದೆ ಜನ ಕೆ. ಇ.ಬಿ. ಸಮಸ್ಯೆ ಬಿಟ್ಟರೆ ಬೇರೆ ವಿಷಯಕ್ಕೆ ಬರುವಂತಹ ಸ್ಥಿತಿ ನಿರ್ಮಾಣವಾಗಿಲ್ಲ. ತಾವೇನಾದರೂ ತಿದ್ದುಪಡಿ ಮಾಡಿ ಇದನ್ನು ಸ್ಥಗಿತ ಮಾಡಿ ಇದನ್ನು ಸ್ಥಗಿತ ಮಾಡಿ ಇರುವ ಉಗ್ರಾಣಗಳನ್ನು ಆಯಾಯ ಸಬ್ ಡಿವಿಜನ್‌ನಲ್ಲೇ ಮುಂದುವರೆಸುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ? ಅಕಸ್ಮಾತ್ ಸಬ್ ಡಿವಿಜನ್ ಲೆವಲ್‌ನಲ್ಲಿ ತಪ್ಪಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಡಿ ಎಂದು ನಾವ್ಯಾರಿಗೂ ಹೇಳಿಲ್ಲ. ನೀವು ಇಶ್ಯೂ ಮಾಡುವ ಕಡೆ ತಪ್ಪಾಗಿದ್ದರೆ ನಿಮ್ಮ ಕೈಯಾರಿಟಿ ವೀಲಿ ಕೊಟ್ಟಿದ್ದರೆ ನಿಮ್ಮ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಅವರ ಮೇಲೆ ಕ್ರಮ ಜರುಗಿಸಬಹುದಾಗಿತ್ತು. ಹಾಗಾದರೆ ನಿಮ್ಮ ಎ ಇ ಇ ಗಳು ಕ್ರಮ ಜರುಗಿಸುವ ಹಂತದಿಂದ ಆಚೆ ಹೋಗಿದ್ರಾ? ಇದನ್ನೆಲ್ಲಾ ತಾವು ಮತ್ತೆ ಯೋಜನೆ ಮಾಡಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಆ ಉಗ್ರಾಣವನ್ನು ಅಲ್ಲೇ ಮುಂದುವರೆಸಿಕೊಡುತ್ತೀರಿ ಎಂದು ಭಾವಿಸಿ ಈ ಒಂದು ಸ್ಪಷ್ಟೀಕರಣವನ್ನು ತಮ್ಮಿಂದ ಕೇಳುತ್ತಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಈ ಸಬ್ ಡಿವಿಜನಲ್ ಸ್ಟೋರ್ಸ್‌ಗಳನ್ನು ಶಿಫ್ಟ್ ಮಾಡುವುದರಿಂದ ಆಗುವ ಅನುಕೂಲಗಳೇನು ಮತ್ತು ಅನಾನುಕೂಲಗಳೇನು ಎಂಬ ಬಗ್ಗೆ ನಾನು ಕೆ.ಇ.ಬಿ ಯ ಅಧಿಕಾರಿಗಳನ್ನು ಕರೆಸಿ ಕೇಳಿದೆ. ಈಗ ಇನ್‌ವೆಂಟರಿ ರಾಜ್ಯಾದ್ಯಂತ ಸ್ಟೆಡ್ - ಔಟ್ ಆಗಿರುವುದರಿಂದ ಅದರ ಸೂಕ್ತವಾದ ಬಳಕೆಯಾಗುತ್ತಿಲ್ಲ. ತೀರಾ ಕೆಳಮಟ್ಟದಲ್ಲಿ, ಅದು ಕಂಟ್ರಾಕ್ಟರ್ ಇರಬಹುದು ಅಥವಾ ನಮ್ಮ ಕೆ.ಇ.ಬಿ ಅಧಿಕಾರಿಗಳು ಇರಬಹುದು, ಅವರು ಆ ಮೆಟೀರಿಯಲ್ ಯೂನ್ ಮಾಡುವಾಗ ತಾರತಮ್ಯ ಮಾಡುತ್ತಾರೆಂದು ಎಲ್ಲಾ ಕಡೆ ಕಂಪ್ಲೇಂಟ್ ಬರುತ್ತಿದೆ. ಈಗ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ, ಬಹಳ ದೂರವಾದರೆ, ರೈತರಿಗೆ

ತೊಂದರೆಯಾಗುವುದಾದರೆ, ಅಂತಹವುಗಳನ್ನು ಕ್ಯಾನ್ಸಲ್ ಮಾಡೋಣ. ಕೆಲವು ಕಡೆ ಅಡ್ಮನಿಸ್ಟ್ರೇಟಿವ್ ಗ್ರಿಪ್ ಹೋಗುತ್ತಿರುವುದರಿಂದ ಆ ರೀತಿ ಮಾಡಬೇಕಾಯಿತು. ಈಗ ಟ್ರಾನ್ಸ್‌ಪೋರ್ಟ್ ಕಾಸ್ಟ್ ಜಾಸ್ತಿಯಾಗುತ್ತಿದೆ. ಆ ಎಲ್ಲಾ ಕಾರಣಗಳಿಂದ ಅಂದರೆ economy, proper utilisation of materials and maintenance of proper inventory. ಈ ಮೂರು ಮುಖ್ಯ ಕಾರಣಗಳಿಂದ ಇದನ್ನು ಮಾಡಿದ್ದಾರೆ. ಅದು ತೀರಾ ದೂರವಾಗಿ, ಯಾವುದಾದರೂ ಕ್ಷೇತ್ರಕ್ಕೆ, ಯಾವುದಾದರೂ ಸಬ್ ಡಿವಿಜನ್‌ಗೆ ಬಹಳ ಅನಾನುಕೂಲವಾಗಿದ್ದರೆ I will set it right. ಬಟ್ ಈ ಪ್ರಿನ್ಸಿಪಲ್ ಇದೆಯಲ್ಲಾ, ಅದರ ಹಿಂದಿರತಕ್ಕಂಥ ಯೋಜನೆ ಇದೆಯಲ್ಲಾ, ಅದು ಸರಿಯಾಗಿದೆ.

+ ಶ್ರೀ ಎನ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಉತ್ತರದಿಂದ ನಮಗೆ ಸಮಾಧಾನವಾಗಿದೆ. ಆದರೆ ನಾನು ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಈ ಅಸಮರ್ಪಕವಾದ ವಿದ್ಯುತ್ ಸರಬರಾಜು ಏನಿದೆ, ಅದಕ್ಕೂ ಮತ್ತು ಈ ಸಾಮಗ್ರಿಗಳ ವಿತರಣೆಗೂ ಕೂಡ ಸಂಬಂಧ ಇದೆ. ಅನೇಕ ಕಡೆ ಏನಾಗಿದೆ ಎಂದರೆ, ನೀವು ಇನ್‌ಸ್ಟಾಲ್‌ಮೆಂಟ್‌ನಲ್ಲಿ ಸಾಮಗ್ರಿಗಳನ್ನು ಕೊಡುತ್ತಿದ್ದೀರಿ. ಒಂದು ಸಲ ಬಂದರೆ ವೈರ್ ಕೊಡುವುದು, ಒಂದು ಸಲ ಥಿಂಗ್ಸ್ ಕೊಡುವುದು, ಇನ್ನೊಂದು ಸಲ ಕಂಬಗಳನ್ನು ಕೊಡುವುದು, ಈ ರೀತಿ ಈಗ ನಡೆಯುತ್ತಿದೆ. ಹೀಗಾಗಿ ಸಮರ್ಪಕವಾಗಿ ಈ ಸಾಮಗ್ರಿಗಳ ವಿತರಣೆಯಲ್ಲಿಯೂ ಕೂಡ ವಿಳಂಬವಾಗುತ್ತಿರುವುದರಿಂದ ಸಮರ್ಪಕವಾಗಿ ವಿದ್ಯುತ್ ಸರಬರಾಜು ಆಗುವಲ್ಲಿ ಕೂಡ ತೊಂದರೆಯಾಗುತ್ತಿದೆ. ಉಗ್ರಾಣಗಳನ್ನು ಅಲ್ಲೇ ಮುಂದುವರೆಸುವುದರ ಜೊತೆಗೆ ಅದನ್ನು ಸ್ಟೆಂಥನ್ ಮಾಡಬೇಕು. ಎಲ್ಲೆಲ್ಲಿ ಸಮಸ್ಯೆಗಳು ಉದ್ಭವ ಆಗುತ್ತದೋ ಅದನ್ನು ತಕ್ಷಣವೇ ನಿಮ್ಮ ಅಧಿಕಾರಿಗಳು ಬಗೆಹರಿಸಬೇಕು. ಅನೇಕ ವೇಳೆ ಕೆ ಇ ಬಿ ಅಧಿಕಾರಿಗಳು, ಇಂಜಿನಿಯರ್‌ಗಳು ಮತ್ತು ಲೈನ್‌ಮ್ಯಾನ್‌ಗಳು ಸಮಸ್ಯೆ ಏನೆಂಬುದನ್ನು ತಿಳಿದು ಕೊಳ್ಳುವಲ್ಲೇ ವಾರಗಟ್ಟಲೆಯಾಗುತ್ತದೆ. ಹೀಗಾಗಿ ಅನೇಕ ಕಡೆ ಮುಷ್ಕರಗಳು, ರೈತರು ಬಂದು ಕಛೇರಿಗೆ ಮುತ್ತಿಗೆ ಹಾಕುವುದು ಇವೆಲ್ಲಾ ನಡೆಯುತ್ತಿದೆ. ಎಲ್ಲೆಲ್ಲಿ ಸಮಸ್ಯೆಗಳು ಬರುತ್ತವೆಯೋ ಅದನ್ನು ತಕ್ಷಣ ಅಟೆಂಡ್ ಮಾಡಬೇಕೆಂಬ ಸೂಚನೆಯನ್ನು ನಿಮ್ಮ ಸಿಬ್ಬಂದಿಗೆ ನೀಡಬೇಕು. ಮೆಟೀರಿಯಲ್ಸ್‌ಗಳನ್ನು ಅದಷ್ಟೂ ಕೂಡ ಒಂದೇ ಕಂತಿನಲ್ಲಿ ಕೊಡತಕ್ಕ ವ್ಯವಸ್ಥೆಯನ್ನೂ ಸಹ ತಾವು ಮಾಡಬೇಕೆಂದು ಕೋರುತ್ತೇನೆ.

+ ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಎರಡು ದೃಷ್ಟಿಕೋನಗಳಿವೆ. ಅವುಗಳು ಏನೆಂದರೆ, ಬಳಕೆದಾರನಿಗೆ ತೊಂದರೆಯಾಗಬಾರದು, ಕಂಟ್ರಾಕ್ಟರ್‌ಗಳಿಗೆ ತೊಂದರೆ ಆಗಬಹುದು. ಮಾನ್ಯ ಸದಸ್ಯರಿಗೂ ಕೂಡ ಇದು ಗೊತ್ತಿದೆ; ಎಷ್ಟೋ ಸಾರಿ ಕಳುಹಿಸಿದ ಮೆಟೀರಿಯಲ್ಸ್‌ಗಳು, ರೈತರಿಗೆ ಕಳುಹಿಸಿದ ಕಂಬಗಳು ಇರಬಹುದು, ವೈರ್ ಇರಬಹುದು, ಕಂಡಕ್ಟರ್ಸ್‌ಗಳು ಇರಬಹುದು ಅಥವಾ ಇನ್ನಾವುದೇ ಇರಬಹುದು; ಅವುಗಳು ನಡುವೆಯೇ ಎಲ್ಲೋ ಹೋಗಿ ಬಿಡುತ್ತದೆ. ಅದನ್ನು ತಪ್ಪಿಸುವುದಕ್ಕೋಸ್ಕರ ಕೆ ಇ ಬಿ ಯವರು ಇದೊಂದು ಅಡ್ಮನಿಸ್ಟ್ರೇಟಿವ್ ಗ್ರಿವ್ ಇರಲಿ ಎಂದು ಈ ರೀತಿ ಮಾಡಿದ್ದಾರೆ. ಇನ್‌ವೆಂಟರಿ ಬಹಳ ಕಡೆ ಆದರೆ, ಕೆಲವು ಏನು ಮಾಡುತ್ತಾರೆ ಎಂದರೆ, ಕೆಲವರು ಅದನ್ನು ಮಾರಿಕೊಳ್ಳುತ್ತಾರೆ. ಎಲ್ಲಾ ಕಡೆಯೂ ಈ ರೀತಿ ಆಗುವುದಿಲ್ಲ, ಕೆಲವು ಕಡೆ ಮಾತ್ರ ಈ ರೀತಿಯಾಗುತ್ತದೆ. ಕಂಟ್ರಾಕ್ಟರ್‌ಗಳು ಮತ್ತು ಅಲ್ಲಿಯ ಸ್ಥಳೀಯ ಕೆ ಇ ಬಿ ಅಧಿಕಾರಿಗಳು ಶಾಮೀಲಾಗಿ ಈ ರೀತಿಯಾಗುತ್ತಿದೆ. ಇದರಿಂದಾಗಿ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಆ ಕಾರಣದಿಂದ ಈ

ಪ್ರೆಷರ್ ತಂದಿದ್ದೇವೆ. ಅವರು ಹೇಳಿದಂತೆ ಈಗ ಸಿಸ್ಟಮ್ ಇಂಪ್ರೂವ್‌ಮೆಂಟ್ ಪೂರ್ತಿಯಾಗಿ ಆಗದ ಹೊರತು ವೋಲ್ಟೇಜ್‌ನಲ್ಲಿ ಏರು ಪೇರು ಆಗುವುದು, ಅಥವಾ ವೊಲ್ಟೇಜ್ ಆಗಾಗ ಡ್ರಾಪ್ ಆಗುವ ತೊಂದರೆಗಳು ಇದ್ದೇ ಇರುತ್ತದೆ. ಈಗಾಗಲೇ ಈ ವರ್ಷದಲ್ಲಿ ನಾವೇನು ಪ್ಲಾನ್ ಹಾಕಿಕೊಂಡಿದ್ದೇವೆ, ಆ ಪ್ಲಾನ್ ರೀತಿ ಈ ಸಿಸ್ಟಮ್ ಇಂಪ್ರೂವ್‌ಮೆಂಟ್ ಮಾಡಿದರೆ ತಾವು ಹೇಳಿದ ತೊಂದರೆ ತಪ್ಪುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೇ, ಇದು ವಾಸ್ತವವಲ್ಲ. ನಾನು ಅವರಿಗೆ ಬಹಳ ಕನ್‌ವಿನ್ಸ್ ಮಾಡಲಿಕ್ಕೆ ಟ್ರೈ ಮಾಡಿದ್ದೇನೆ. ನಿಮ್ಮ ಕೆ ಇ ಬಿ ಲಾರಿಯಿಂದ ರೈತರಿಗೆ ಯಾವ ಮೆಟೀರಿಯಲ್ ಕೂಡ ಸಪ್ಲೈ ಆಗುತ್ತಿಲ್ಲ. ರೈತರು ತಮ್ಮ ಟ್ರಾಕ್ಟರ್‌ಗಳನ್ನು ತೆಗೆದು ಕೊಂಡು ತಮ್ಮ ಸ್ವಂತ ವ್ಯವಸ್ಥೆಯಲ್ಲಿ ಮೆಟೀರಿಯಲ್‌ಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ರೈತರು ೫೦-೧೦೦ ಕಿ.ಮೀ ದೂರ ಹೋಗಬೇಕಾಗಿದೆ. ಇಲ್ಲಿರುವ ಇಂಡೆಂಟ್ ಅಲ್ಲಿಗೆ ಹೋದರೆ ಪಾಸ್ ಆಗುವುದಿಲ್ಲ. ಡಿವಿಜನ್‌ಗಳಲ್ಲಿ ಒಂದು ರೀತಿಯ ಸಿಸ್ಟಮ್ ಮತ್ತು ಸಬ್ ಡಿವಿಜನ್‌ಗಳಲ್ಲಿ ಇನ್ನೊಂದು ರೀತಿಯ ಸಿಸ್ಟಮ್ ಅನ್ನು ಇಟ್ಟಿದ್ದಾರೆ. ಇಂಡೆಂಟ್ ಇಲ್ಲಿ ಕೊಡುತ್ತಾರೆ, ಮೆಟೀರಿಯಲ್ಸ್ ಅಲ್ಲಿ ಕೊಡುತ್ತಾರೆ. ಹೋದವನು ವಾಪಸ್ ಬರಬೇಕಾಗುತ್ತದೆ. ಕೆ ಇ ಬಿ ನವರು ಏತಕ್ಕಾಗಿ ಈ ರೀತಿ ನಿಮಗೆ ಕೆಟ್ಟ ಹೆಸರು ತರಲು ಪ್ರಯತ್ನ ಮಾಡುತ್ತಿದ್ದಾರೋ ನಮಗೆ ಗೊತ್ತಿಲ್ಲ. ನಾನು ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಇಲ್ಲದೇ ಇರತಕ್ಕ ಒಂದು ಸಮಸ್ಯೆಯನ್ನು ಉದ್ಭವ ಮಾಡಿ ಅಧಿಕಾರಿಗಳು ಇವತ್ತು ನಮಗೆಲ್ಲಾ ರಾಜಕೀಯವಾಗಿ ತೊಂದರೆಯನ್ನು ಉದ್ಭವ ಮಾಡಿದ್ದಾರೆ. ನೀವು ಬೇಕಾದರೆ ಇದರ ಬಗ್ಗೆ ತಾಲ್ಲೂಕುಗಳಿಂದ ಮಾಹಿತಿಗಳನ್ನು ತರಿಸಿಕೊಳ್ಳಿ. ದುರುಪಯೋಗ ಆಗಿದ್ದರೆ, ಅಕಸ್ಮಾತ್ ಏನಾದರೂ ಅವ್ಯವಹಾರ ಆಗಿದ್ದರೆ, ಅದು ನಿಮ್ಮ ಎ ಇ ಇ ಲೆವೆಲ್‌ನಲ್ಲಿ ಆಗುತ್ತಿದೆ. ಎಸ್ಟಿಮೇಟ್‌ಗಳು ಸ್ಯಾಂಕ್ಷನ್ ಮಾಡಿಕೊಡುವ ಕಡೆ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ. ಮೆಟೀರಿಯಲ್‌ಗಳು ಮೂವ್ ಮಾಡುವ ಕಡೆ....

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ನಾನು ಇದನ್ನೇ ಮೂರನೆಯ ಬಾರಿಗೆ ಕೇಳುತ್ತಿದ್ದೇನೆ. ನಾನೇನು ಹೇಳುತ್ತಿದ್ದೇನೆ ಎಂದರೆ, ನಿಮ್ಮ ರೈತರಿಗೆ ಅಥವಾ ನಿಮ್ಮ ಏರಿಯಾದಲ್ಲಿರುವ ಜನರಿಗೆ ತೊಂದರೆಯಾದರೆ, ಆ ತೊಂದರೆಯನ್ನು ಹೇಗೆ ತಪ್ಪಿಸಬೇಕು? ಆ ತೊಂದರೆಯನ್ನು ತಪ್ಪಿಸುವುದಕ್ಕೋಸ್ಕರ ಇದೊಂದು ಪ್ರಿವೆಂಟೀವ್ ಮೆಷರ್ಸ್ ಆಗಿ ಇದನ್ನು ತೆಗೆದು ಕೊಂಡಿದ್ದೇವೆ. ಆ ಅಧಿಕಾರಿಗಳಿಗೆ ಶಿಕ್ಷೆ ಕೊಡಿ, ಅವನನ್ನು ಸಸ್ಪೆಂಡ್ ಮಾಡಿ, ಇವನನ್ನು ಸಸ್ಪೆಂಡ್ ಮಾಡಿ ಎಂದು ನೀವು ಕೇಳುತ್ತಿದ್ದೀರಿ. ಅದೆಲ್ಲಾ ಮಾಡಲಿಕ್ಕ ಬರುತ್ತದೆ. ಮಾಡುವುದಕ್ಕಾಗುವುದಿಲ್ಲ ಎಂದೇನಿಲ್ಲ. ಈಗ ತಾವು ಹೇಳಿದಿರಿ, ಸಣ್ಣ ಟ್ರಾನ್ಸ್ ಫಾರ್ಮ್ಸ್ ಏನಾದರೂ ಬೇಕಾದರೆ ನಾನು ತಿಪಟೂರಿಗೆ ಹೋಗಬೇಕಾಗುತ್ತದೆ ಎಂದು, ಅಂತಹ ಕಡೆ ನಾನು ಒಪ್ಪುತ್ತೇನೆ. ನೀವು ನಿಮ್ಮ ಕಿಬ್ಬನಹಳ್ಳಿ ಕ್ಯಾಸ್‌ನಲ್ಲಿ ಒಂದು ಸ್ಟೋರ್ ಬೇಕೆಂದು ಕೇಳಿದ್ದೀರಿ. ಲೆಜಿಟಮೇಟ್ ಆಗಿ ಅವರ ಡಿಮ್ಯಾಂಡ್ ಇದ್ದರೆ ನಾವು ಒಪ್ಪತ್ತೇವೆ. ಈಗಿರತಕ್ಕ ರೀತಿಯಲ್ಲಿ ಸ್ವಲ್ಪ ಅಡ್ಮಿನಿಸ್ಟ್ರೇಟಿವ್ ಇಂಪ್ರೂವ್‌ಮೆಂಟ್ ಮಾಡುವ ಸಲುವಾಗಿ ಈ ಐಡಿಯಾವನ್ನು ಬಳಸಿದ್ದೇವೆ.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ: ... ಅವರಿಗೆ ಅರ್ಥ ಆಗಿಲ್ಲ. ರೈತರಿಗೆ ಇವತ್ತು ಭಾರೀ ತೊಂದರೆಯಾಗಿದೆ....

(ಗೊಂದಲ)

ಅಧ್ಯಕ್ಷರು : ಸರ್ಕಾರ ತನ್ನ ಉದ್ದೇಶವನ್ನು ಸ್ಪಷ್ಟಪಡಿಸಿದೆ. ಆಡಳಿತಾತ್ಮಕವಾದ ಅನುಕೂಲತೆಗಾಗಿ ಈ ಆದೇಶವನ್ನು ಹೊರಡಿಸಿದ್ದೇವೆ, ಸಾರ್ವಜನಿಕ ಹಿತಕ್ಕೆ ಎಲ್ಲೆಲ್ಲಿ ಧಕ್ಕೆ ಬರುತ್ತದೋ ಅಂತಹ ಎಲ್ಲಾ ಜಾಗದಲ್ಲಿ ನಾವು ಈ ಆಜ್ಞೆಯನ್ನು ಮರು ಪರಿಶೀಲನೆ ಮಾಡುವುದಕ್ಕೆ ಸಿದ್ಧರಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರು ಆಡಳಿತ ನಡೆಸತಕ್ಕವರು, ಅವರು ಹೇಳಿದ ಮಾತನ್ನು ನಾವು ನಂಬಬೇಕಾಗುತ್ತದೆ, ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇದು ಗಮನ ಸೆಳೆಯುವ ಸೂಚನೆಯಾದ್ದರಿಂದ ಇದರ ಬಗ್ಗೆ ಹೆಚ್ಚಿನ ಸ್ಪಷ್ಟೀಕರಣ ಬೇಡ.

(2) ಇಂಜಿನಿಯರ್‌ಗಳ ಮುಷ್ಕರದಿಂದಾಗಿ ರಾಜ್ಯದಲ್ಲಿ ಕಾಮಗಾರಿಗಳು ಸ್ಥಗಿತಗೊಂಡಿರುವುದು.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಜನವರಿ 4ನೇ ತಾರೀಖಿನಿಂದ ಇಂಜಿನಿಯರುಗಳು ನಡೆಸಿದ ಮುಷ್ಕರದಿಂದಾಗಿ ರಾಜ್ಯದ ಎಲ್ಲಾ ಕಾಮಗಾರಿಗಳು ಸ್ಥಗಿತಗೊಂಡಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ನೀರಾವರಿ ಇಲಾಖೆಯ ಇಂಜಿನಿಯರುಗಳು ದಿನಾಂಕ ೦೪-೧೦-೧೯೯೯ ರಿಂದ ೦೬-೧೧-೧೯೯೯ರ ವರೆಗೆ ಮುಷ್ಕರ (೩೪ ದಿನಗಳು) ನಡೆಸಿದ್ದು, ಇಲಾಖೆಯ ಕೆಲಸಗಳು ಭಾಗಶ: ಕುಂಠಿತಗೊಂಡಿದ್ದು. ನಿಗಧಿತ ವೇಳೆಯಲ್ಲಿ ಗುತ್ತಿಗೆ ಕಾಮಗಾರಿಗಳು ಪೂರ್ಣಗೊಳಿಸಬೇಕಿದ್ದು, ಇದನ್ನು ಆದಷ್ಟು ಬೇಗ ಮುಗಿಸಲು ಯೋಜಿಸಿದೆ. ತಡವಾಗಿ ಮುಗಿಯುವ ಕಾಮಗಾರಿಗಳಿಗೆ ಗುತ್ತಿಗೆ ನಿಯಮದಂತೆ ಅವಧಿ ವಿಸ್ತರಣೆ ನೀಡಲಾಗುವುದು. ನಬಾಡ್ ಕಾಮಗಾರಿಗಳನ್ನು ನಿಗಧಿತ ವೇಳೆಯಲ್ಲಿ ಮುಗಿಸಲು ಯಾವ ತೊಂದರೆಯಾಗುವುದಿಲ್ಲ. ರಸ್ತೆ ಮತ್ತು ಕಟ್ಟಡಗಳ ವಾರ್ಷಿಕ ನಿರ್ವಹಣೆಗಳು ನಿಗಧಿತ ವೇಳೆಯಲ್ಲಿ ಮುಗಿಸಲಾಗುವುದು. ಆದಾಗ್ಯೂ ಕಾಮಗಾರಿಗಳನ್ನು ಆದಷ್ಟು ಶೀಘ್ರವಾಗಿ ಮುಗಿಸಲು ಎಲ್ಲಾ ಸಾಧ್ಯವಾದ ಕ್ರಮಗಳನ್ನು ತೆಗೆದು ಕೊಳ್ಳಲಾಗುವುದು.

+ ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬಹಳ ಪ್ರಾಮುಖ್ಯವಾದಂತಹ ವಿಚಾರಗಳನ್ನು ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಚೆ ಪಡುತ್ತಿದ್ದೇನೆ. ಕೇವಲ ದೊಡ್ಡ ದೊಡ್ಡ ಕಾಮಗಾರಿಗಳಿಗೆ ಮಾತ್ರ ಮುಷ್ಕರದ ಬಿಸಿ ತಟ್ಟಿಲ್ಲ, ಇವತ್ತು ಸಾಮಾನ್ಯ ಬಡ ಮನುಷ್ಯನಿಗೆ ಆಶ್ರಯ ಯೋಜನೆ ಮನೆಗೆ ಇಂಜಿನಿಯರ್ ಕೊಡಬೇಕಾದಂತಹ ಒಂದು ದೃಢೀಕರಣ, ಬಿಲ್ ಪಾವತಿಗಾಗಿ ಬೇಕಾದಂತಹ ಎಂ. ಬಿ. ಬುಕ್ಕಿನ ಎಂಟ್ರಿ ಮಾಡಿ ಸರ್ಟಿಫಿಕೇಟ್ ಕೊಡುವಂತಹ ವಿಚಾರಗಳು ಇವೆಲ್ಲಕ್ಕೂ ಕೂಡ ತೊಂದರೆಯಾಯಿತು. ಸುಮಾರು ೩೪ ದಿವಸಗಳು ಆದ ಮುಷ್ಕರದಿಂದಾಗಿ ಅವರು ಆ ಕೆಲಸಗಳನ್ನು ಮಾಡಲಿಕ್ಕಾಗಲಿಲ್ಲ. ಅವರಿಗೆ ಬಿಲ್‌ಗಳು ಇನ್ನೂ ಸಿಕ್ಕಲಿಲ್ಲ. ಸರ್ಕಾರದ ಧೋರಣೆಯಿಂದ, ಹಿಂದೆ ಕಂಟ್ರಾಕ್ಟರ್‌ಗಳಿಗೆ ಪೇಮೆಂಟ್ ಬಾಕಿ ಇದ್ದ ಕಾರಣ ಹಲವಾರು ಕಂಟ್ರಾಕ್ಟರ್‌ಗಳು ಕಾಂಟ್ರಾಕ್ಟ್ ಶುರು ಮಾಡುವಾಗಲೇ ಡಿಲೇ ಮಾಡಿದ್ದು ನಮ್ಮ ಗಮನಕ್ಕೆ ಬಂದಿದೆ. ಮೂರನೆಯದಾಗಿ, ಎಸ್ಟಿಮೇಟ್‌ಗಳು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗುವಂತಹ ಸಂದರ್ಭಗಳಲ್ಲಿ ಕೂಡ ಸಾಕಷ್ಟು ಡಿಲೇಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಸರ್ಕಾರ ಇಂಜಿನಿಯರ್‌ಗಳು ೩೪